**ಕಳ್ಳ:** ಸಾಹೇಬರೆ... ನಾನು ಬೀಡಿ ಸೇದಬೇಕು. ಅಂಗಡಿಗೆ ಹೋಗಿ ಬೀಡಿ ತೆಗೆದುಕೊಂಡು ಬರುತ್ತೇನೆ, ನನ್ನ ಕೈಗೆ ಹಾಕಿರುವ ಕೋಳ ಬಿಚ್ಚಿ.
**ಪೊಲೀಸ್:** ವಾರೆ ವ್ಹಾ, ಕೋಳ ಬಿಚ್ಚಿಸಿಕೊಂಡು ತಪ್ಪಿಸಿಕೊಂಡು ಹೋಗುವ ಉದ್ದೇಶನಾ... ಏನೂ ಬೇಡ ಇಲ್ಲೇ ಇರು, ನಾನೇ ಅಂಗಡಿಗೆ ಹೋಗಿ ಬೀಡಿ ತರುತ್ತೇನೆ.
**ಕಳ್ಳ:** ಹಾಗಾದರೆ, ನೀವೇ ನಿಮ್ಮ ಕೈಗೆ ಹಾಕಿರುವ ಕೋಳ ಬಿಚ್ಚಿಕೊಂಡು ಹೋಗಿ ಬೇಗ ಬನ್ನಿ. ನಾನು ಇಲ್ಲೇ ಇರುತ್ತೇನೆ. ಪೊಲೀಸ್ ಆ ಕಡೆ ಹೋಗುತ್ತಲೇ ಕಳ್ಳ ಅಲ್ಲಿಂದ ಎಸ್ಕೇಪ್!




**ರಾಮು:** ಅಲ್ಲಿ ನೋಡ್ರೊ, ಬುಮ್ರಾ ಅಷ್ಟು ದೂರದಿಂದ ಓಡಿ ಬಂದು ಬೌಲಿಂಗ್ ಮಾಡ್ತಾ ಇದಾನೆ.
**ಸೋಮು:** ಹೇ ಬಿಡಪ್ಪ, ಅದೇನ್ ಮಹಾ... ನಮ್ಮೂರ್ಲಲ್ಲಿ ಒಬ್ಬ ಒಂದು ಕಿಲೊಮೀಟರ್‌ನಿಂದ ಓಡಿ ಬಂದು ಬೌಲಿಂಗ್ ಮಾಡ್ತಾನೆ.
**ಭೀಮು:** ಇಲ್ಲಿ ಕೇ ಳ್ರಪ್ಪ. ನಮ್ಮೂರ್ಲಲ್ಲೂ ಒಬ್ಬ ಬೌಲಿಂಗ್ ಮಾಡೋಕೆ ಅಂತ ತಿಂಗಳ ಹಿಂದೆ ಹೋದವನು ಇನ್ನೂ ಬಂದಿಲ್ಲ. ಎಲ್ಲಿಂದ ಬರ್ತಿದಾನೋ ಗೊತ್ತಿಲ್ಲ.

**ರಮೇಶ:** ಸರ್, ‘ದಾರಿ ತಪ್ಪಿದ ಮಗ’ ಕಾದಂಬರಿ ಓದುತ್ತಾ ದಾರಿ ತಪ್ಪಿ ಎಲ್ಲಿಗೆ ಬಂದಿದ್ದೇನೆಂದು ಗೊತ್ತಿಲ್ಲ. ಮನೆಗೆ ಹಿಂದಿರುಗುವುದೂ ಹೇಗೆಂದು ಗೊತ್ತಿಲ್ಲ.
**ಅಪರಿಚಿತ:** ನಿಮ್ಮ ಹತ್ತಿರ ‘ಮರಳಿ ಮನೆಗೆ ಬಂದವನು’ ಕಾದಂಬರಿ ಇದೆಯಾ?
**ರಮೇಶ:** ಇದೆ ಸರ್!
**ಅಪರಿಚಿತ:** ಹಾಗಿದ್ರೆ ಒಂದು ಕೆಲಸ ಮಾಡಿ. ಆ ಪುಸ್ತಕ ಓದಿಕೊಂಡು ಮನೆಗೆ ಹೋಗಿ.

**ಟೀಚರ್:** ಹೇ ರಂಗ, ಮನುಷ್ಯನ ಬದುಕನ್ನು ಜಟಕಾ ಬಂಡಿಗೆ ಏಕೆ ಹೋಲಿಸುತ್ತಾರೆ. ಕಾರಿಗೆ ಯಾಕೆ ಹೋಲಿಸುವುದಿಲ್ಲ?
**ರಂಗ:** ಏಕೆಂದರೆ ಜಟಕಾ ಬಂಡಿಯು ನಿಧಾನವಾಗಿ ಚಲಿಸಿ ಸಾವಿನ ಹತ್ತಿರಕ್ಕೆ ತಡವಾಗಿ ಕರೆದುಕೊಂಡು ಹೋಗುತ್ತದೆ. ಆದರೆ, ಕಾರು ವೇಗವಾಗಿ ಚಲಿಸಿ, ಸಾವಿನ ಹತ್ತಿರಕ್ಕೆ ಬೇಗ ತಲುಪಿಸುತ್ತದೆ.

**ಮಾನ್ಯ ಎಸ್. ಎಂ. ಕೃಷ್ಣರವರಿಗೆ....ಶ್ರದ್ಧಾಂಜಲಿ...🙏**




ಅವರಿಗೆ ಬೆಂಗಳೂರನ್ನು ‘ಸಿಂಗಪುರ’ ಮಾಡುವ ಕನಸಿತ್ತಂತೆ. ಸದ್ಯಕ್ಕೆ ನಗರದ ‘ರಸ್ತೆ ಗುಂಡಿ’ಗಳನ್ನಾದ್ರೂ ಮುಚ್ಚಿದರೆ, ಅವರ ಆತ್ಮಕ್ಕೆ ಶಾಂತಿ ಸಿಗಬಹುದು.

**ರಾಜೇಶ:** (ಆಟೊ ಡ್ರೈವರ್‌ಗೆ) ಏನಪ್ಪ, ಜಯನಗರಕ್ಕೆ ಬರುತ್ತಿಯಾ?
**ಆಟೊ ಡ್ರೈವರ್:** ಬರ್ತೀನಿ ಹತ್ತಿ ಸರ್!
**ರಾಜೇಶ:** ಎಷ್ಟು ಕೊಡಬೇಕು?
**ಆಟೊ ಡ್ರೈವರ್:** ಸರ್ ಮೀಟರ್ ಮೇಲೆ ಹತ್ತು ರೂಪಾಯಿ ಕೊಡಿ. ಜಯನಗರದಲ್ಲಿ ಆಟೊ ಇಳಿದು, 10 ರೂಪಾಯಿ ನೋಟನ್ನು ಮೀಟರ್ ಮೇಲೆ ಇಟ್ಟು ಹೀಗಂದ...
**ರಾಜೇಶ:** ತೊಗೊಳಪ್ಪ ಮೀಟರ್ ಮೇಲೆ 10 ರೂಪಾಯಿ.

**ಕಿಟ್ಟು:** ಹೇ ಪುಟ್ಟು, ನಾನು ಯಾವಾಗಲೂ ಬಸ್ಸು, ರೈಲು ಮತ್ತು ನೆಲದ ಮೇಲೆ ಓಡಾಡುವ ವಾಹನಗಳಲ್ಲಿ ಮಾತ್ರ ಪ್ರಯಾಣಿಸುತ್ತೇನೆ.
**ಪುಟ್ಟು:** ಯಾಕಪ್ಪ, ಫ್ಲೈಟ್‌ನಲ್ಲಿ ಪ್ರಯಾಣ ಮಾಡಲ್ವಾ?
**ಕಿಟ್ಟು:** ಅದು ಹಾಗಲ್ಲ... ನೆಲದ ಮೇಲೆ ಓಡಾಡುವ ವಾಹನಗಳಿಗೆ ಅಪಘಾತವಾದರೆ ಇಳಿದುಕೊಂಡು ಓಡಬಹುದು. ಆದರೆ ಆಕಾಶದಲ್ಲಿ ಅಪಘಾತವಾದರೆ ಇಳಿದುಕೊಂಡು ಓಡುವುದಕ್ಕೆ ಆಗುತ್ತಾ? ಆಗಲ್ಲ ತಾನೇ?

**ರಂಗ:** ಅಜ್ಜಿ ಈ ಕತ್ತಲಲ್ಲಿ ಏನು ಹುಡುಕುತ್ತಿರುವೆ?
**ಅಜ್ಜಿ:** ಇಲ್ಲಿ ಹತ್ತು ರೂಪಾಯಿ ನಾಣ್ಯ ಬಿತ್ತು, ಅದನ್ನೇ ಆಗಿನಿಂದಲೂ ಹುಡುಕುತ್ತಿದ್ದೇನೆ ಇನ್ನೂ ಸಿಕ್ಕಿಲ್ಲ.
**ರಂಗ:** ಅಜ್ಜಿ ಕತ್ತಲಲ್ಲಿ ಹುಡುಕಿದರೆ ಎಲ್ಲಿ ಕಾಣುತ್ತೆ. ಅಲ್ಲಿ ಬೆಳಕಲ್ಲಿ ಹೋಗಿ ಹುಡುಕಿ ಸಿಗಬಹುದು.

ಹ್ಯಾಪಿ ಹುಚ್ ಡೇ ಅಂತ ಅವಳು ವಾಟ್ಸ್ಆ್ಯಪ್‌ನಲ್ಲಿ ಮೆಸೇಜ್ ಮಾಡಿದಳು. ಅದಕ್ಕೆ ಅವನು, ಏನಿದು ಅಂತ ಪ್ರತಿಕ್ರಿಯಿಸದ. ಅದಕ್ಕವಳು ನನ್ನ ಫೋನ್, ನನ್ ಇಷ್ಟ. ಏನ್ ಬೇಕಾದ್ರೂ ವಿಶ್ ಮಾಡ್ತೀನಿ ಅಂದಳು.

ಸಂಗ್ರಹ: ವಿ.ಎಸ್.ಎಸ್. ಗುರುಶಿವಮೂರ್ತಿ, ಬೆಂಗಳೂರು